**ದಿನಾಂಕಃ 26.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ. ವೈ.ಜಿ.ಪಿ. ವಕೀಲರಿಂದಃ**

1 ರಿಂದ 3 ನೇ ಪ್ರತಿವಾದಿಯವರು ನನ್ನ ಗಂಡನ ಸಹೋದರರು ಅಂದರೆ ಸರಿ. 4 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಮಗ ಅಂದರೆ ಸರಿ. ನಾನು ಯಾವ ದಾವಾ ಆಸ್ತಿಗೆ ದಾವೆ ದಾಖಲಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ ಸಹ ಗೊತ್ತಿಲ್ಲ. ನಾನು ದಾವಾ ಆಸ್ತಿಯಲ್ಲಿ ಹಿಸ್ಸೆ ಬೇಕೆಂದು ದಾವೆ ದಾಖಲಿಸಿರುತ್ತೇನೆ. 1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಸೇರಿಸಿ ಉಳಿದ ಕುಟುಂಬದ ಆಸ್ತಿಗಳಲ್ಲಿ ಹಿಸ್ಸೆ ಬೇಕೆಂದು ಅ.ದಾ.ನಂ.21/2021 ರಂತೆ ಮಾನ್ಯ ಹಿರಿಯ ವ್ಯವಹಾರ ನ್ಯಾಯಾಧೀಶರ ನ್ಯಾಯಾಲಯದಲ್ಲಿ ದಾವೆ ದಾಖಲಿಸಿರುತ್ತಾರೆ ಅಂದರೆ ಸರಿ. ಸದರಿ ದಾವೆಯು

ಡಿಕ್ರಿಯಾಗಿರುತ್ತದೆ ಅಂದರೆ ಸರಿ. ನಂತರ 1 ನೇ ಪ್ರತಿವಾದಿಯು ಸದರಿ ಡಿಕ್ರಿಯಂತೆ

ಎಫ್.ಡಿ.ಪಿ.ನಂ.15/2023 ರಂತೆ ಅರ್ಜಿ ದಾಖಲಿಸಿರುತ್ತಾರೆ ಅಂದರೆ ಸರಿ. ಸದರಿ ಅರ್ಜಿಯಲ್ಲಿ ನ್ಯಾಯಾಲಯದ ಆದೇಶದಂತೆ ಸರ್ವೇಯರ್ ಸ್ಥಳಕ್ಕೆ ಬಂದಿರುತ್ತಾರೆ ಅಂದರೆ ಸರಿ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಈಗಾಗಲೇ ಹಿಸ್ಸೆ ಆಗಿರುವುದರಿಂದ ಈ ದಾವೆಯು ಊರ್ಜಿತವಾಗಿರುವುದಿಲ್ಲ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**
**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಸಿ/ಸಿ 1 ನೇ ಹೆಚ್ಚುವರಿ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**